ಬಾಲುಸುತ, ಬೆಂಗಳೂರು

*ಆಪತ್ಕಾಲದಲ್ಲಿ ಆಗುವವರು ನೆಂಟರೋ ಅಥವಾ ಸ್ನೇಹಿತರೋ?*



ಸಾಮಾನ್ಯವಾಗಿ, ಆಂಬುಲೆನ್ಸ್‌ನವರು.

ಬಿ. ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ

*ನಾರಿ ಮುನಿದರೆ ಮಾರಿ; ನಾರಿ ಒಲಿದರೆ....?*

ಕೊಂಡುಕೊಳ್ಳಿ– ಅವಳು ಬೇಡಿದುದೆಲ್ಲವನ್ನೂ...

ಎನ್. ವಸಂತಾ, ಬೆಂಗಳೂರು

*ವಿನಯವಿಲ್ಲದ ವಿದ್ಯಾವಂತನಿಗೂ, ಶ್ರದ್ಧೆಯಿಲ್ಲದ ಬುದ್ಧಿವಂತನಿಗೂ ವ್ಯತ್ಯಾಸವುಂಟೆ ಅಣ್ಣಯ್ಯಾ?*

ಉಂಟು; ಒಬ್ಬ ಗ್ರೌಂಡಿಂಗ್ ಇಲ್ಲದ ಸರ್ಕ್ಯೂಟು; ಇನ್ನೊಬ್ಬ ಲೂಸ್ ಕಾಂಟಾಕ್ಟ್ ಇರುವ ಹೋಲ್ಡರ್.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ರಾಮಾಯಣದಲ್ಲಿ ಭರತ ರಾಮನಿಗೆ ರಾಜ್ಯವನ್ನು ಕೊಡುವುದಿಲ್ಲ ಎಂದಿದ್ದರೆ ಏನಾಗಿಬಿಡುತ್ತಿತ್ತು ರಾಮ್?*

ಶ್ರೀರಾಮನಿಗೆ ಭರತನು ಪಾದರಕ್ಷೆಯನ್ನು ಹಿಂತಿರುಗಿಸಬೇಕಾಗುತ್ತಿತ್ತು!

ವಿ. ಹೇಮಂತಕುಮಾರ್, ಬೆಂಗಳೂರು

*ಮನುಷ್ಯನಿಗೆ ಸಾವು ನಾಳೆ ಎಂದು ಗೊತ್ತಾದರೆ ಏನಾಗುತ್ತಿತ್ತು?*



ನರ್ಸಿಂಗ್‌ಹೋಂಗಳ ಒಂದು ದಿನದ ಬಿಲ್ ಉಳಿಯುತ್ತಿತ್ತು.

ವೀಣಾ ಶರ್ಮ. ಬೋಸ್ಮಾನಹಳ್ಳಿ

*ಇನ್ನು ಮುಂದೆ ಮತ ಹಾಕದಿದ್ದರೆ ಟೀಕೆ ಮಾಡುವ ಹಾಗಿಲ್ಲವಂತೆ; ಸುಮ್ಮನಿದ್ರೆ ಏನಾದ್ರೂ ಕೊಡ್ತಾರಂತಾ?*

ಮತವನ್ನೇ ಹಾಕದವರು ಕೊಡುವುದು ಒಂದೇ – ದೇಶಕ್ಕೆ ತಲೆನೋವು.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

*ಜಾತೀಕರಣವು ಜಾಗತೀಕರಣವಾಗುತ್ತಿದೆಯಲ್ಲ?*

ಅಂಟುರೋಗಗಳೇ ಹಾಗೆ; ಜಾತಿ ಜಗದ ಅತಿ ಕ್ಷುದ್ರ ಅಂಟುರೋಗ.

ಎಂ.ಎ. ಕುಮಾರ್, ಬೆಂಗಳೂರು

*ಹೆಣ್ಣು ಯಾವ ಸಂದರ್ಭದಲ್ಲಿ ಬೇಗ ರೆಡಿ ಆಗುತ್ತಾಳೆ?*

ತವರಿನ ಕರೆ ಬಂದಾಗ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಸಾರಾಯಿ ಕುಡಿಯಲು ಆಧಾರ್ ಕಾರ್ಡ್ ಇರಲೇಬೇಕೆಂದು ಸರ್ಕಾರ ಹೇಳಿದರೆ?*

ಕುಡುಕರು ಆಧಾರ್ ಕಾರ್ಡನ್ನೇ ಲೋಟದ ಆಕಾರಕ್ಕೆ ಮಡಚಿ, ಲ್ಯಾಮಿನೇಟ್ ಮಾಡಿಸಿ, ಬಳಸತೊಡಗುವರಂತೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

*'ಹರಸಾಹಸ' ಅಂತ ಹೇಳೋದು ಯಾಕೆ ಸಾರ್?*

ಹಿಮಾಲಯದ ಥಂಡಿಯಲ್ಲಿ ತಲೆಯಲ್ಲಿ ನೀರು, ಚಂದ್ರನನ್ನು ತುಂಬಿಕೊಂಡೂ ನಗುತ್ತಿರುವುದು ಸಾಹಸದ ಉತ್ತುಂಗವಾದ್ದರಿಂದ!

ಮಹಾವೀರ ಕಾಸರ, ಶಿವಮೊಗ್ಗ

*ಹೆಣ್ಣು ಕಾಲು ಜಾರಿದ್ದಾಳೆ ಎಂದರೆ ಏನರ್ಥ?*

ಗಂಡು ಇನ್ನು ಮುಕ್ಕಾಲು ಜಾರಿಸಲು ತಯಾರಿದ್ದಾನೆಂದು.

ದಿನೇಶ್, ಗುಡ್ಡದೂರು

*ರಾಜಕಾರಣಿಗಳೇಕೆ ಕಪ್ಪು ಬಣ್ಣದ ಬಟ್ಟೆಗಳನ್ನು ಧರಿಸುವುದಿಲ್ಲ?*

ಅಯ್ಯಪ್ಪ ಎನ್ನುವವರಿಗೂ, ಅಯ್ಯಯ್ಯಪ್ಪ ಎನ್ನಿಸುವವರಿಗೂ ವ್ಯತ್ಯಾಸವಿರಲೆಂದು.

ಮೋಹನ್ ರಾಜು, ಶಿವಮೊಗ್ಗ

*ವಿಲ್ಸ್ ಪವರ್‌ಗೂ, ವಿಲ್ ಪವರ್‌ಗೂ ಏನು ಸಂಬಂಧ?*

ಹೆಚ್ಚು ಹೆಚ್ಚು ವಿಲ್ಸ್ ಪವರ್‌ಗೆ ಒಳಗಾದಷ್ಟೂ, ಹೆಚ್ಚು ಹೆಚ್ಚು ವೇಗವಾಗಿ ಬರೆದ ವಿಲ್ ಅಸ್ತಿತ್ವಕ್ಕೆ ಬರುತ್ತದೆ.

ಬಸವಣ್ಣ ಹೊನಖಾಂಡೆ. ಬಸವನಬಾಗೇವಾಡಿ

*ಸೌಂದರ್ಯ ಎಲ್ಲಿರುತ್ತೆ?*

ಪ್ರೀತಿಯಲ್ಲಿ; ನಾವು ಪ್ರೀತಿಸುವುದೆಲ್ಲವೂ ಸುಂದರವೇ.

## ಬಹುಮಾನಿತ ಪ್ರಶ್ನೆ

ಹೆಚ್. ಗೋಪಿನಾಥ್, ಬಳ್ಳಾರಿ

*ನಿಷ್ಪಕ್ಷಪಾತ, ಭ್ರಷ್ಟಾಚಾರರಹಿತ, ಕಳಂಕರಹಿತ ಪಕ್ಷ ಯಾವುದಾದರೂ ಇದೆಯೆ?*

ಎರಡು ಇವೆ; ಕೃಷ್ಣ ಪಕ್ಷ; ಶುಕ್ಲ ಪಕ್ಷ.

ಮಾಲತಿ ರಾಜು, ಬೆಂಗಳೂರು

*ಮಾನ, ಮರ್ಯಾದೆ ಮಾರುವ ಮಾಲ್‌ನ ವಿಳಾಸ ಕೊಡ್ತೀರಾ?*

ಪ್ರಶಸ್ತಿ ಕೊಂಡರೆ ಮಾನ, ಮರ್ಯಾದೆ ಉಚಿತ. ಮಾಹಿತಿಗಾಗಿ ಸರ್ಕಾರಿ ಪ್ರಶಸ್ತಿ ಮಾರಾಟ ವಿಭಾಗವನ್ನು ಸಂಪರ್ಕಿಸಿ.

ಕಾಳೀಹುಂಡಿ ಕೆ.ವಿ. ಶಿವಕುಮಾರ್, ಮೈಸೂರು

*ಮಹಿಳೆಯರು ಖರೀದಿಸುವ ಪದಾರ್ಥಗಳೆಲ್ಲಾ ಹೆಚ್ಚು ದುಬಾರಿಯಾಗಿರುತ್ತವಲ್ಲಾ...?*

ಛೆ! ಜೀವಮಾನ ಪೂರ್ತಿ ಬೆಲೆ ತೆರಬೇಕಾದಂತಹ ಗಂಡನನ್ನು ಖರೀದಿಸುವುದರ ಮುಂದೆ ಮಿಕ್ಕಿದ್ದೆಲ್ಲ ಸಸ್ತಾ.

ಎಂ.ಎನ್. ಸೋಮಶೇಖರ್, ಮೈಸೂರು

*ಸ್ವರ್ಗಲೋಕದಲ್ಲಿ ಜನಸಂಖ್ಯೆ ನಿರಂತರವಾಗಿ ಹೆಚ್ಚುತ್ತಿದ್ದರೆ ಏನಾಗುತ್ತದೆ?*




ಸ್ವರ್ಗದಲ್ಲೂ ಅಪಾರ್ಟ್‌ಮೆಂಟ್ ಕಟ್ಟಬೇಕಾಗುತ್ತದೆ; ಒಂದೇ ತೊಂದರೆ – ಸ್ವರ್ಗದಲ್ಲಿ ಕಂಟ್ರಾಕ್ಟರ್‌ಗಳಿಲ್ಲ.

ಸೃಜನ ಜೈನ್, ಹೂವಿನಹಡಗಲಿ

*ಕ್ರಿಕೆಟಿಗನಿಗೆ ಅರ್ಜುನ್ ಪ್ರಶಸ್ತಿ, ಬರಹಗಾರನಿಗೆ ಜ್ಞಾನಪೀಠ ಪ್ರಶಸ್ತಿ ಇದ್ದಂತೆ ರಾಮ್ ನೀಡುವ ಉತ್ತರಕ್ಕೆ ಪ್ರಶಸ್ತಿ ಏಕಿಲ್ಲ ಸಾರ್?*

ಹಿರೇಮಗಳೂರು ಕಣ್ಣನ್‌ರವರು ಹೋದಲ್ಲೆಲ್ಲ ಈ ಅಂಕಣದ ಪ್ರಸ್ತಾಪ ಮಾಡುವುದಕ್ಕಿಂತ ದೊಡ್ಡ ಪ್ರಶಸ್ತಿ ಇಲ್ಲವೇ ಇಲ್ಲ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಕುಡುಕರಿಗೆ ಮುಪ್ಪಿಲ್ಲವಂತೆ. ಹೌದೆ?*

ನಿಜ. ಮಧ್ಯದಲ್ಲೇ ಮದ್ಯದ ತ್ರೋಗೆ ರನೌಟ್ ಆಗಿಬಿಡುತ್ತಾರೆ.

■ ರಾಮ್